# <u>*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*</u>

***ಎಸ್‌ಸಿ.* 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಚಂದ್ರಶೇಖರ | | <u>*ಪ್ರಮಾಣ ಮಾಡಿಸಿದ ದಿನಾಂಕಃ*</u> |
| **ತಂದೆ ಹೆಸರು** | ಃ ಪುಟ್ಟಸ್ವಾಮಿ | | **13.02.2020** |
| **ವಯಸ್ಸು** | ಃ **38** ವರ್ಷ | | |
| **ವೃತ್ತಿ** | ಃ ದಿನ ಪತ್ರಿಕೆ ವಿತರಣೆ | **ಪ್ರಾ.ಸಾ.** ಃ | **02** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ | **02** |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕಃ *23.12.2016* ರಂದು ಮಧ್ಯಾಹ್ನ *1.00* ರಿಂದ *2.00* ಗಂಟೆಯ ಸಮಯದಲ್ಲಿ ಕೆ ಆರ್ ಆಸ್ಪತ್ರೆಯ ಶವಗಾರದಲ್ಲಿ ಕೃಷ್ಣ ಈತನ ಶವದ ಮಹಜರನ್ನು ಮಾಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ನನ್ನ ಜೊತೆ ಸಂತೋಷ ಮತ್ತು ಗೋವರ್ಧನ ಇದ್ದರು. ಶವ ಪಂಚನಾಮೆಯನ್ನು ನಿ.ಪಿ.*7* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*7*(ಎ) ಎಂದು ಗುರುತಿಸಲಾಯಿತು. ಮೃತ ಕೃಷ್ಣನ ಶವದ ತಲೆಯ ಮತ್ತು ಬೆನ್ನಿನ ಮೇಲೆ ಗಾಯಗಳು ಇದ್ದವು. ಶವ ಪಂಚನಾಮೆಯ ಕಾಲಕ್ಕೆ ಪೊಲೀಸರು *3* ಫೋಟೋಗಳನ್ನು ತೆಗೆದಿರುತ್ತಾರೆ, ಸದರಿ ಫೋಟೋಗಳಲ್ಲಿ ನಾನು ಕೂಡ ಇದ್ದೆನು ಎಂದು ಹೇಳುತ್ತಾರೆ, ಸದರಿ ಫೋಟೋಗಳನ್ನು ನಿ.ಪಿ.*8* ರಿಂದ ನಿ.ಪಿ.*10* ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-</u>**

. ನಾನು ಮೃತ ಕೃಷ್ಣ, ಈತನನ್ನು ನೋಡಲು ಅಪೋಲೋ ಆಸ್ಪತ್ರೆಗೆ ಹೋಗಿರುವುದಿಲ್ಲ. ಅಪೋಲೋ ಆಸ್ಪತ್ರೆಯಲ್ಲಿ ಕೃಷ್ಣ ಈತನು ಚಿಕಿತ್ಸೆ ಪಡೆಯುವ ಸಮಯದಲ್ಲಿ ಮೃತಪಟ್ಟಿರುತ್ತಾನೆ ಎಂಬ ವಿಷಯ ನನಗೆ ಗೊತ್ತಿತ್ತು. ಸಾಕ್ಷಿಯು ಮುಂದುವರೆದು ಶವವನ್ನು ತೆಗೆದುಕೊಂಡು ಕೆ ಆರ್ ಆಸ್ಪತ್ರೆಗೆ ಬಂದಿದ್ದರು. ನಾನು ನೇರವಾಗಿ ಅಲ್ಲಿಗೆ ಹೋಗಿರುತ್ತೇನೆ. ಗಾಯಗಳಿಗೆ ಬ್ಯಾಂಡೇಜ್ ಹಾಕಿದ್ದರು ಎಂದರೆ ಸರಿ ಇದೆ.

**ಪಾಟೀ ಸವಾಲು ಃ ಆರೋಪಿ 7 ಪರ ಜಿ.ವಿ.ಆರ್, ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಜಿ.ಎಂ.ಎನ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಃ ಆರೋಪಿ 9 ಪರ ಯು.ಎಸ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

***ಮರು ವಿಚಾರಣೆಃ-*** *ಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*